# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1277 |
| ಸದಸ್ಯರ ಹೆಸರು | ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ |
| ಉತ್ತರಿಸಬೇಕಾದ ದಿನಾಂಕ | 26/02/2018 |
| ಉತ್ತರಿಸುವ ಸಚಿವರು | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

* * * * *

| ಕ್ರ ಸಂ | ವಿಷಯ | ಉತ್ತರ |
|---|---|---|
| ಅ) | ರಾಜ್ಯದ ಹಿಂದುಳಿದ ವರ್ಗ ಹಾಗೂ ಸಮಾಜ ಕಲ್ಯಾಣ ಇಲಾಖೆಗಳ ಹಾಸ್ಟೆಲ್‌ನಲ್ಲಿ ಖಾಲಿ ಇರುವ ವಾರ್ಡನ್, ಸಹಾಯಕ ವಾರ್ಡನ್, ಅಡುಗೆಗಾರರ ಹಾಗೂ ಸಹಾಯಕ ಅಡುಗೆಗಾರರ ಹುದ್ದೆಗಳೆಷ್ಟು; | **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಮಂಜೂರಾಗಿರುವ, ಭರ್ತಿಯಾಗಿರುವ ಹಾಗೂ ಖಾಲಿ ಇರುವ ನಿಲಯ ಪಾಲಕರು, ನಿಲಯ ಮೇಲ್ವಿಚಾರಕರು, ಕಿರಿಯ ನಿಲಯ ಮೇಲ್ವಿಚಾರಕರು, ಅಡುಗೆಯವರು ಹಾಗೂ ಅಡುಗೆ ಸಹಾಯಕರ ಹುದ್ದೆಗಳ ವಿವರ ಕೆಳಕಂಡಂತಿರುತ್ತದೆ. |

| ಕ್ರ ಸಂ | ಹುದ್ದೆಯ ಹೆಸರು | ಮಂಜೂರು | ಭರ್ತಿ | ಖಾಲಿ | ಭರ್ತಿಗೆ ಕ್ರಮ ವಹಿಸಿರುವ ಹುದ್ದೆಗಳು |
|---|---|---|---|---|---|
| 1 | ನಿಲಯ ಪಾಲಕರು | 186 | 142 | 44 | 0 |
| 2 | ನಿಲಯ ಮೇಲ್ವಿಚಾರಕರು | 2241 | 1388 | 853 | 440 |
| 3 | ಕಿರಿಯ ನಿಲಯ ಮೇಲ್ವಿಚಾರಕರು | 307 | 296 | 11 | 11 |
| 4 | ಅಡುಗೆಯವರು | 5467 | 2176 | 3291 | 1547 |
| 5 | ಅಡುಗೆ ಸಹಾಯಕರು | 3384 | 807 | 2577 | 2470 |
| | ಒಟ್ಟು | 11585 | **4809** | **6776** | **4468** |

**ಸಮಾಜ ಕಲ್ಯಾಣ ಇಲಾಖೆ**

ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳಲ್ಲಿ ಈ ಕೆಳಕಂಡಂತೆ ಹುದ್ದೆಗಳು ಖಾಲಿ ಇರುತ್ತದೆ.

| ಕ್ರಸಂ. | ಹುದ್ದೆಯ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ |
|---|---|---|
| 1 | ವಾರ್ಡನ್ | 663 |
| 2 | ಜೂನಿಯರ್ ವಾರ್ಡನ್ | 09 |
| 3 | ಅಡುಗೆಯವರು | 1710 |
| 4 | ಅಡುಗೆ ಸಹಾಯಕರು | 1867 |

| ಕ್ರ ಸಂ | ವಿಷಯ | ಉತ್ತರ |
|---|---|---|
| ಆ) | ಖಾಲಿ ಹುದ್ದೆ ಭರ್ತಿಗೆ ಕೈಗೊಂಡ ಕ್ರಮಗಳೇನು? | **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.** ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ನಿಲಯ ಮೇಲ್ವಿಚಾರಕರು, ಕಿರಿಯ ನಿಲಯ ಮೇಲ್ವಿಚಾರಕರು, ಅಡುಗೆಯವರು ಹಾಗೂ ಅಡುಗೆ ಸಹಾಯಕರ ಹುದ್ದೆಗಳ ಭರ್ತಿಗೆ ಕೈಗೊಳ್ಳಲಾಗಿರುವ ಕ್ರಮಗಳ ವಿವರ ಕೆಳಕಂಡಂತಿರುತ್ತದೆ.<br>1) 164 ನಿಲಯ ಮೇಲ್ವಿಚಾರಕರ ಹುದ್ದೆಗಳನ್ನು 2017 ನೇ ಸಾಲಿನಲ್ಲಿ ಭರ್ತಿ ಮಾಡಲಾಗಿದೆ. 440 ನಿಲಯ ಮೇಲ್ವಿಚಾರಕರ ಹುದ್ದೆ ಭರ್ತಿಗೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಕೆ. ಪಿ ಎಸ್ ಸಿ ಯಿಂದ ಹುದ್ದೆಗಳ ಭರ್ತಿಗೆ ದಿನಾಂಕ: 25/11/2017 ರಂದು ಅಧಿಸೂಚನೆ |

| | | |
|---|---|---|
| | | ಹೊರಡಿಸಲಾಗಿದೆ.<br>2) 296 ಕಿರಿಯ ನಿಲಯ ಮೇಲ್ವಿಚಾರಕರ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಲಾಗಿದ್ದು, ಉಳಿದ 11 ಖಾಲಿ ಹುದ್ದೆಗಳಿಗೆ ಮುಂಬಡ್ತಿ ನೀಡಲು ಕ್ರಮ ವಹಿಸಲಾಗಿದೆ.<br>3) 2013 ರಿಂದ 2017 ರವರೆಗೆ ಅಡುಗೆಯವರು / ಅಡುಗೆ ಸಹಾಯಕರ 134 ಹುದ್ದೆಗಳನ್ನು ಭರ್ತಿ ಮಾಡಲಾಗಿದ್ದು, ಖಾಲಿ ಇರುವ 1547 ಅಡುಗೆಯವರು ಹಾಗೂ 2470 ಅಡುಗೆ ಸಹಾಯಕರ ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದು, ನೇಮಕಾತಿ ಆದೇಶ ನೀಡಬೇಕಿರುತ್ತದೆ.<br>4) ವಿದ್ಯಾರ್ಥಿ ನಿಲಯಗಳ ಸುಗಮ ನಿರ್ವಹಣೆ ದೃಷ್ಟಿಯಿಂದ ತಾತ್ಕಾಲಿಕವಾಗಿ ಅಡುಗೆಯವರು ಹಾಗೂ ಅಡುಗೆ ಸಹಾಯಕರ ಹುದ್ದೆಗಳಿಗೆ ಹೊರಸಂಪನ್ಮೂಲದಿಂದ ಸೇವೆಯನ್ನು ಪಡೆದು ನಿರ್ವಹಣೆ ಮಾಡಲಾಗುತ್ತಿದೆ.<br><u>ಸಮಾಜ ಕಲ್ಯಾಣ ಇಲಾಖೆ.</u><br>ಆರ್ಥಿಕ ಇಲಾಖೆ ಅನುಮೋದನೆ ನೀಡಿರುವಂತೆ ಇಲಾಖೆಯ ವಿದ್ಯಾರ್ಥಿ ನಿಲಯಗಳಲ್ಲಿ ಖಾಲಿ ಇರುವ ಗ್ರೂಪ್-ಸಿ ಮತ್ತು ಡಿ ವೃಂದದ ಹುದ್ದೆಗಳ ಭರ್ತಿಗಾಗಿ ಕೈಗೊಂಡಿರುವ ಕ್ರಮಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. |

ಹಿಂವಕ 75 ಬಿಇಟಿ 2018

(ಹೆಚ್. ಆಂಜನೇಯ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಮಾನ್ಯ ವಿಧಾನ ಪರಿಷತ್ ಸದಸ್ಯರು (ಶಿಕ್ಷಕರ ಕ್ಷೇತ್ರ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1277 ಕ್ಕೆ ಅನುಬಂಧ

| ಕ್ರ ಸಂ. | ಹುದ್ದೆಯ ಹೆಸರು | ನೇರ ನೇಮಕಾತಿ / ಮುಂಬಡ್ತಿ | ನೇರ ನೇಮಕಾತಿಗಾಗಿ ಕ್ರಮ ವಹಿಸಿರುವ ಹುದ್ದೆಗಳ ಸಂಖ್ಯೆ | ಮುಂಬಡ್ತಿಗಾಗಿ ಕ್ರಮ ವಹಿಸಿರುವ ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|---|
| 1 | ವಾರ್ಡನ್ | ನೇರ ನೇಮಕಾತಿ | 443 | – | ಈ ಹುದ್ದೆಗಳನ್ನು ಭರ್ತಿ ಮಾಡಲು ಕೆ.ಪಿ.ಎಸ್.ಸಿ ಗೆ ಪ್ರಸ್ತಾವನೆ ಸಲ್ಲಿಸಲಾಗಿರುವ ಮೇರೆಗೆ, ಕೆಪಿಎಸ್‌ಸಿ ಯಿಂದ ಅಧಿಸೂಚನೆ ಸಂ: ಪಿಎಸ್‌ಸಿ 1/ಆರ್‌ಟಿ (ರ) ಬಿ-2/16 ದಿನಾಂಕ 22-10-2016 ರಲ್ಲಿ ಅಧಿಸೂಚನೆ ಹೊರಡಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ. |
| 2 | ಜೂನಿಯರ್ ವಾರ್ಡನ್ | ಮುಂಬಡ್ತಿ | – | 9 | ಖಾಲಿ ಇರುವ 09 ಜೂನಿಯರ್ ವಾರ್ಡನ್ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡುವ ಹುದ್ದೆಗಳಾಗಿದ್ದು, ಬಡ್ತಿ ನೀಡಲು ಕ್ರಮವಹಿಸಲಾಗುವುದು. |
| 3 | ಅಡುಗೆಯವರು | ಮುಂಬಡ್ತಿ | – | 1710 | ಖಾಲಿ ಇರುವ ಹುದ್ದೆಗಳಿಗೆ ಅಡುಗೆ ಸಹಾಯಕರ ಹುದ್ದೆಯಿಂದ ಮುಂಬಡ್ತಿ ನೀಡಲು ಜಿಲ್ಲಾ ಹಂತದಲ್ಲಿ ಕ್ರಮ ವಹಿಸಲಾಗುತ್ತಿದೆ. |
| 4 | ಅಡುಗೆ ಸಹಾಯಕರು | ನೇರ ನೇಮಕಾತಿ | 885 | – | ಆರ್ಥಿಕ ಇಲಾಖೆ ಸಹಮತಿ ನೀಡಿರುವಂತೆ ಖಾಲಿ ಇರುವ 885-ಅಡುಗೆ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ದಿನಾಂಕ: 20-10-2016 ರಲ್ಲಿ ಅಧಿಸೂಚನೆ ಹೊರಡಿಸಲಾಗಿತ್ತು. ಅದರಂತೆ ಎಲ್ಲಾ ಜಿಲ್ಲೆಗಳಲ್ಲಿ ನೇಮಕಾತಿ ಪ್ರಕ್ರಿಯೆ ಆದೇಶ ಹೊರಡಿಸುವ ಅಂತಿಮ ಹಂತದಲ್ಲಿದೆ. |

ಹಿಂವಕ 75 ಬಿಇಟಿ 2018

ಎಸ್.ಎನ್. ಕಲಾವತಿ
(ಎಸ್. ಎನ್. ಕಲಾವತಿ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.